ಮೂಲೆಯಲ್ಲಿ ಮೌನವಾಗಿ ಕೂತಿದ್ದ ವೃತ್ತಾಕಾರದ ಮಣೆಯಂಥ ಈ ಯಂತ್ರ ತಾನಾಗಿ ಚಾಲೂ ಆಗುತ್ತದೆ. ಮೆಲ್ಲಗೆ ಬುಗುರಿಯ ಹಾಗೆ ಸುತ್ತುತ್ತ, ಎಡಕ್ಕೂ ಬಲಕ್ಕೂ ಕ್ರಮಬದ್ಧವಾಗಿ ಚಲಿಸುತ್ತ, ಮಂಚದ ಕಾಲಿಗೊ, ಗೋಡೆಗೊ, ಫ್ರಿಜ್ಜಿಗೊ ಮೈತಾಕಿಸಿಕೊಳ್ಳದೆ ಅದು ಮನೆಯ ಮೂಲೆಮೂಲೆಗೂ ಹೋಗಿ ಮೊದಲು ದೂಳು ಕಸವನ್ನು ಹೀರಿ ತೆಗೆಯುತ್ತದೆ. ನಂತರ ಎರಡನೇ ರೌಂಡ್‌ನಲ್ಲಿ ಸೋಪಿನ ನೀರಲ್ಲಿ ಅದ್ದಿದ ಸ್ಪಾಂಜ್‌ನಿಂದ ನೆಲವನ್ನು ಒರೆಸಿ, ತನ್ನ ಕೆಲಸ ಮುಗಿದ ಮೇಲೆ ತಾನು ಹೊರಟ ಜಾಗಕ್ಕೇ ಹೋಗಿ ತಟಸ್ಥವಾಗುತ್ತದೆ. ಈ ಯಂತ್ರಕ್ಕೆ ರೂಂಬಾ ಎನ್ನುವ ಬದಲು 'ರೂಂ ಬಾಯ್' ಎಂದೇಕೆ ಹೆಸರಿಟ್ಟಿಲ್ಲ ಎಂಬ ಪ್ರಶ್ನೆಗೆ ನನಗೆ ಉತ್ತರ ಸಿಕ್ಕಿದೆ. ಕಸ ಗುಡಿಸುವ, ನೆಲ ಒರೆಸುವ ಕೆಲಸವೆಲ್ಲ ನಮ್ಮಲ್ಲಷ್ಟೇ ಏಕೆ, ವಿದೇಶದಲ್ಲೂ ಮಹಿಳೆಯರದ್ದೇ ಆಗಿರುತ್ತದೆ. ರೂಂಬಾಯ್ ಅಲ್ಲ, ಹೆಚ್ಚೆಂದರೆ 'ರೂಂ ಬಾಯಿ' ಎನ್ನಬಹುದಿತ್ತೇನೊ. ಈಗಂತೂ ಅದೂ ಸಾಧ್ಯವಿಲ್ಲ. ಮಹಾಮಾರಿಯ ಈ ಕಾಲದಲ್ಲಿ ಬಾಯಿಗಳೂ ಮನೆಕೆಲಸಕ್ಕೆ ಬರುವಂತಿಲ್ಲದ್ದರಿಂದ ಗೃಹಬಂಧನದಲ್ಲಿದ್ದ ಕೆಲವು ಗೃಹಸ್ಥರು 'ವರ್ಕ್ ಫ್ರಂ ಹೋಮ್' ಬದಲು 'ವರ್ಕ್ ಫಾರ್ ಹೋಮ್' ಎಂದುಕೊಂಡು ನೆಲವನ್ನು ಗುಡಿಸುವ – ಒರೆಸುವ ಕೆಲಸವನ್ನು ಮೈಮೇಲೆ ಎಳೆದುಕೊಂಡಿದ್ದೇನೊ ನಿಜ. ಆದರೆ, ನೆಲವನ್ನು ಗುಡಿಸುವಾಗ ಮುಂದೆಮುಂದಕ್ಕೆ ಹಾಗೂ ಒರೆಸುವಾಗ ಹಿಂದೆಹಿಂದಕ್ಕೆ ಸಾಗಬೇಕೆಂದು ಅಮ್ಮಾವ್ರು ಹೇಳಿಕೊಟ್ಟ ಸೂತ್ರವೇ ಹಿಂದುಮುಂದಾಗಿ, ಗೋಜಲಾಗಿ, ಆ ಕೆಲಸವೂ ಮತ್ತೆ ಮಹಿಳೆಯ ಹೆಗಲಿಗೇ ಬಿದ್ದು, ಆಕೆ ಮೊದಲಿನಂತೆ, ಮುಂ–ಗಾಣದ ಎತ್ತಿನಂತೆ ದುಡಿಯಬೇಕಾಗಿ ಬಂದು, ಕೊನೆಗೂ ಗಂಡನೆಂಬ ಪ್ರಾಣಿ ಟಿವಿಯ ಎದುರಿನ ಸ್ವಸ್ಥಾನಕ್ಕೆ ಸೇರಿತೆಂಬಲ್ಲಿಗೆ ಈ ಸೆಲ್ಫ್ ಪಾರ್ಕಿಂಗ್ ಯಂತ್ರದ ಕತೆಯನ್ನು ನಿಲ್ಲಿಸಬೇಕು. ಆದರೆ, ಆಸೆ ಎಂಬುದೊಂದಿದೆಯಲ್ಲ. ನನ್ನ ಸದಾ ಸಂಗಾತಿಗಳಾಗಿರಬೇಕಿದ್ದ ಮೊಬೈಲ್ ಮತ್ತು ಕನ್ನಡಕಗಳು ಕಣ್ಣುತಪ್ಪಿಸಿ ಆಗಾಗ ಅದ್ಯಾವ ಮಾಯದಲ್ಲೋ ಮಾಯವಾಗುವುದುಂಟು. ಆಗ ಮಂಜುಗಣ್ಣಿನಲ್ಲಿ ಇಡೀ ಮನೆಯನ್ನೆಲ್ಲ ಅವುಗಳಿಗಾಗಿ ಹುಡುಕುವಾಗ ಇವಕ್ಕೂ ಯಾಕೆ ಸೆಲ್ಫ್ ಪಾರ್ಕಿಂಗ್ ಗುಣ ಇನ್ನೂ ಬಂದಿಲ್ಲ ಎಂದುಕೊಂಡು ಅವೆರಡನ್ನೂ ಮರೆತು ಕಾರಿನ ಬಳಿ ಬರುತ್ತೇನೆ.

ಬೆಂಗಳೂರಲ್ಲೂ ಸೆಲ್ಫ್ ಪಾರ್ಕಿಂಗ್ ಕಾರುಗಳು ಬಂದು, ನಾನೂ ಅಂಥದ್ದೊಂದರ ಯಜಮಾನನಾಗಿ ಠೀವಿಯಿಂದ ಸವಾರಿ ಮಾಡುವ ಯೋಜನೆಗೆ ಈಗೀಗ ರೆಕ್ಕೆಪುಕ್ಕ ಮೂಡುತ್ತದೆ. ಪಕ್ಷಿರಾಜನಂತೆ ಅಂಗಳದಲ್ಲಿ ನನಗಾಗಿ ಕಾಯುತ್ತಿರುವ ಆ ಹೊಸ ಕಾರಿನಲ್ಲಿ ಹಾಯಾಗಿ ಕೂತು ನಾನು ಸುಚಿತ್ರಾ ಫಿಲ್ಮ್ ಸೊಸೈಟಿಗೊ, ಲಾಲ್‌ಬಾಗ್ ರಸ್ತೆಯ ಪಾಸ್‌ಪೋರ್ಟ್ ಕಚೇರಿಗೊ ಹೋಗಿ ಇಳಿದೆ ಅಂದುಕೊಳ್ಳಿ. ಹೇಗಿದ್ದರೂ ಈ ಕಾರು ಪಾರ್ಕಿಂಗ್ ಲಾಟ್ ಹುಡುಕಿಕೊಂಡು ಅಲ್ಲೆಲ್ಲೊ ತನ್ನ ಪಾಡಿಗೆ ತಾನು ನಿಂತಿರುತ್ತದೆ ಎಂದುಕೊಂಡರೆ ನಿಮಗೆ ಬೆಂಗಳೂರೇ ಗೊತ್ತಿಲ್ಲ ಅನ್ನಬೇಕಾಗುತ್ತದೆ. ಆ ಬಡಪಾಯಿ ಕಾರು ಅಷ್ಟುದ್ದದ ರಸ್ತೆಯಲ್ಲಿ ಪಾರ್ಕಿಂಗಿಗೆ ಜಾಗ ಹುಡುಕುತ್ತ ಹುಡುಕುತ್ತ ಎಲ್ಲೂ ಸಿಗದೇ ಜಯನಗರದಲ್ಲೂ ಜಾಗ ಸಿಗದೇ ಜೆಪಿ ನಗರ, ಕುಮಾರಸ್ವಾಮಿ ಬಡಾವಣೆಯಲ್ಲೆಲ್ಲ ಅಂಡಲೆದು ಕೊನೆಗೆ ಮರಳಿ ಕೆಂಗೇರಿಗೇ ಬಂದು ನನ್ನ ಮನೆಯ ಬಳಿಯೇ ಹೋಗಿ ಹೊರಗಡೆ ನಿಂತಿದ್ದರೆ ಪರವಾಗಿಲ್ಲ. ನಾನು ಓಲಾನೋ ಊಬರ್ರೋ ಹಿಡಿದು ಮನೆ ಸೇರಬಹುದು. ಹೆಚ್ಚೆಂದರೆ ಪಾರ್ಕಿಂಗ್ ಜಾಗದಲ್ಲಿ ಪೆದ್ದುಪೆದ್ದಾಗಿ ಹಲ್ಲುಗಿಂಜುತ್ತ ನಿಂತ ನನ್ನದೇ ಕಾರಿಗೆ ಕೋಪದಿಂದ ಒದೆದು ಆಮೇಲೆ ಅದರ ಕ್ಷಮೆ ಕೇಳಬಹುದು.

ಅಷ್ಟಾದರೆ ಪರವಾಗಿಲ್ಲ. ಶ್ರೀಕೃಷ್ಣನ ಒದೆತದ ಮಾದರಿಯಲ್ಲಿ ಜಗತ್ತಿನ ಎಲ್ಲ ಕಾರುಗಳ ಮೇಲೂ ನನ್ನ ಹೆಜ್ಜೆ ಗುರುತೇನೂ ಬೀಳುವುದಿಲ್ಲವಲ್ಲ. ಆದರೆ, ಹಾಗೆ ಮನೆ ಸೇರುವ ಬದಲು ಈ ಕಾರು ನನ್ನನ್ನು ಪಾಸ್‌ಪೋರ್ಟ್ ಕಚೇರಿಯ ಬಳಿ ಕೆಳಕ್ಕಿಳಿಸಿ ತಾನು ಪಾರ್ಕಿಂಗಿಗೆಂದು ನಗರದಲ್ಲೆಲ್ಲ ಅಂಡಲೆಯುತ್ತ ಕೊನೆಗೆ ಪೆಟ್ರೋಲ್ ಖರ್ಚಾಗಿ ಮಲ್ಲೇಶ್ವರವೋ ಶೇಷಾದ್ರಿಪುರದಲ್ಲೆಲ್ಲೊ ನಿಂತಿದ್ದರೆ?